4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿ

ಎಸ್.ಸಿ. ನಂಃ 5033/2019

**(ದಿನಾಂಕಃ 29-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಹೆಸರುಃ ಪುಟ್ಟರಾಜು ಪಿ.ಡಬ್ಲ್ಯೂ 08.
ತಂದೆಯ ಹೆಸರುಃ ಮಾಯಣ್ಣ ಸಿ.ಡಬ್ಲ್ಯೂ 14.
ವಯಸ್ಸುಃ 35 ವರ್ಷ
ಉದ್ಯೋಗಃ ಚಾಲಕ ಕೆಲಸ.
ವಾಸಃ ಕಾಮಾಕ್ಷಿ ಪಾಳ್ಯ, ಬೆಂಗಳೂರು.

**ಮುಖ್ಯ ವಿಚಾರಣೆಃ** ಸರ್ಕಾರಿ ಅಭಿಯೋಜಕರಿಂದಃ

ನಮ್ಮ ಮನೆ ಬೆಂಗಳೂರಿನ ಕಾಮಾಕ್ಷಿಪಾಳ್ಯದ ಚೆನ್ನಿಗಪ್ಪ ಲೇ ಔಟ್‌ನಲ್ಲಿ ಇದೆ. ನನ್ನ ಮನೆಯ ಅಕ್ಕ-ಪಕ್ಕದಲ್ಲಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಪೈಕಿ ಯಾರೊಬ್ಬರ ಮನೆ ಇಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಪಿಪಿ ಯವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ, ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಹಾಜರಿರುವ 6 ನೇ ಆರೋಪಿ ಬಸವರಾಜು ರವರ ಮನೆಯಿಂದ 3 ನೇ ಮನೆ ನಮ್ಮ ಮನೆ ಎಂದರೆ ಸರಿಯಲ್ಲ. ಅವರ ಮನೆಯಲ್ಲಿ

ಸುಮಾರು ಜನ ಕೆಲಸ ಮಾಡಿಕೊಂಡಿದ್ದು, ಅವರ ಪೈಕಿ ಮನು, ಬುಡ್ಡ, ಬೋಡಿ, ಕೆಂಗುಟ್ಟೆ ಕುಮಾರ್ ನನಗೆ ಗೊತ್ತು ಎಂದರೆ ಸರಿಯಲ್ಲ.

ಸನ್ 2018 ನೇ ಸಾಲಿನ ಅಕ್ಟೋಬರ್ ತಿಂಗಳಲ್ಲಿ 6 ನೇ ಆರೋಪಿಯ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಮನು ಅವರ ಮಗಳಾದ ಪಲ್ಲವಿರವರನ್ನು ಕರೆದುಕೊಂಡು ಹೋಗಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಅನಂತರ ಅವರನ್ನು ಬಸವರಾಜುರವರು ಹುಡುಕುತ್ತಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

ಹೀಗಿರುವಾಗ, ದಿನಾಂಕಃ 07-01-2019 ರಂದು ಮಧ್ಯಾಹ್ನ ಸುಮಾರು 1-30 ರಿಂದ 2-00 ಗಂಟೆ ಸಮಯದಲ್ಲಿ ನಮ್ಮ ಮನೆಯ ಬಳಿ ನಾನು ಮತ್ತು ನಮ್ಮ ಮನೆಯ ಪಕ್ಕದ ವಾಸಿ ಚಾಸಾ-15 ಚಂದ್ರಯ್ಯ ಮಾತನಾಡುತ್ತಾ ಕುಾತ್ತಿದ್ದಾಗ, ಬಸವರಾಜುರವರ ಮನೆಗೆ ಒಂದು ಕ್ವಾಲೀಸ್ ಬಂತು ಎಂದರೆ ಸರಿಯಲ್ಲ. ಅದರಲ್ಲಿ ಒಬ್ಬರು ಇಳಿದು ಬಸವರಾಜು ಮನೆಯ ಒಳಗೆ ಹೋದರು ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿಗೆ ಧರಣಿ ಸ್ವಿಫ್ಟ್ ಕಾರಿನಲ್ಲಿ ಬಂದು ತನ್ನ ಚಾಲಕ ಮಂಜನೊಂದಿಗೆ ಮನೆಯೊಳಗೆ ಹೋದರು ಎಂದರೆ ಸರಿಯಲ್ಲ. ಸುಮಾರು 1-00 ಗಂಟೆ ಬಳಿಕ ಕ್ವಾಲೀಸ್ ಬಂದಿದ್ದವರ ಜೊತೆ ಧರಣಿಯವರ ಕಾರು ಚಾಲಕ 8 ನೇ ಆರೋಪಿ ಮಂಜ ಹೋದರು ಎಂದರೆ ಸರಿಯಲ್ಲ. ಅದಾದ ಸ್ವಲ್ಪ ಹೊತ್ತಿನ ಬಳಿಕ ಧರಣಿ ಕಾರು ಅಲ್ಲಿಂದ ಹೋಯಿತು ಎಂದರೆ ಸರಿಯಲ್ಲ. ಆ ದಿನ ಕ್ವಾಲೀಸ್‌ನಲ್ಲಿ ಬಂದ ವ್ಯಕ್ತಿ ತಿಮ್ಮರಾಜು ಎಂದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ.

ನಂತರ ವಿಚಾರಿಸಲಾಗಿ, ಬಸವರಾಜು ರವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಮನು ಬಸವರಾಜು ರವರ ಮಗಳಾದ ಪಲ್ಲವಿರವರೊಂದಿಗೆ ಸುಮಾರು 2 ರಿಂದ 2.5 ತಿಂಗಳು ಅಲ್ಲಿ-ಇಲ್ಲಿ ಸುತ್ತಾಡಿಸಿ, ಚನ್ನರಾಯಪಟ್ಟಣದ ಲಾಡ್ಜ್ ಒಂದರಲ್ಲಿ ಇದ್ದಾಗ, 1 ರಿಂದ 5 ಹಾಗೂ 7 ರಿಂದ 14 ಆರೋಪಿತರು 6 ನೇ ಆರೋಪಿತನ ಸಂಚು ಹಾಗೂ ಆದೇಶದ ಮೇರೆಗೆ ಕೊರಟಗೆರೆ ಬಳಿ ಜೆಟ್ಟಿ ಅಗ್ರಹಾರ ಸಮೀಪ ಕರೆದುಕೊಂಡು ಹೋಗಿ ಸಾಯಿಸಿದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ದಿನಾಂಕಃ 28-03-2019 ರಂದು ನನಗೆ ಈಗ ವಿವರವಾಗಿ ಓದಿ ಹೇಳಲಾದಃ *"ನಮ್ಮ ಮನೆ ............. ಮಾಡಿದ್ದರಂತೆ"* ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು. ಸದರಿ ಎಲ್ಲಾ ವಿಚಾರಗಳು ನನಗೆ ಸ್ವತಃ ಗೊತ್ತಿದ್ದರೂ ಸಹ ಆರೋಪಿತರಿಗೆ ಹೆದರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಟಿ.ಎಸ್.ಕೆ ವಕೀಲರಿಂದಃಏನೂ ಇಲ್ಲ.**

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇ ಕೇ ಸರಿ ಇದೆ

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಧುಗಿರಿ